SRI SHIVAKUMARA RANGAPRAYOGA SHALE

ಅಹಲ್ಯೆಯನ್ನು ಅಲ್ಲಿ ಕಂಡ ಗೌತಮ ಅವಳನ್ನು ತಾನು ಮರೆತೆ ಎಂದು ವಿಹ್ವಲನಾಗುತ್ತಾನೆ. 'ತಪದ ರಾಶಿ ವೆಚ್ಚವಾಗಲಿಂದುಮೋದಕೆ' ಎಂದು ತಾನೂ ಅಹಲ್ಯೆಯ ಕಡೆಗೆ ಹೊರಡುತ್ತಾನೆ. ಅಲ್ಲಿಗೆ ಪಥಭ್ರಷ್ಟ ಚಕ್ರ ಇನ್ನೊಂದು ಸುತ್ತು ಬಂದಂತೆ. ಆ ಚಕ್ರಭ್ರಮಣ ಪೂರ್ತಿಯಾಗುವುದು ಅಹಲ್ಯೆಯಲ್ಲಿಯೇ. ಇಂದ್ರ ಗೌತಮ ವೇಷದಲ್ಲಿ ಪ್ರವೇಶಿಸಿದಾಗ ಅವಳು ಅವನನ್ನು ಉತ್ಕಟವಾಗಿ ಸ್ವಾಗತಿಸುತ್ತಾಳೆ. ಏನೋ ಅಸಹಜವಾದದ್ದು ಈ ರಾತ್ರಿಯಲ್ಲಿದೆ ಎಂಬುದು ಅವಳಿಗೂ ಹೊಳೆದಿದೆ 'ಏ ಮಾಯೆ ಇರುಳಿದುವು' ಎನ್ನುತ್ತಾಳೆ. ಗೌತಮನ ವರ್ತನೆ ಕಂಡು 'ಎಂದುಮಿಲ್ಲದ ರೀತಿ, ಎಂದುಮಿಲ್ಲದ ಮಾತು!' ಎನ್ನುತ್ತಾಳೆ. ಬಂದವನು ಗೌತಮನಲ್ಲ ಎಂದು ಗೊತ್ತಾದಾಗ 'ಭ್ರಾಂತಳಾಗಿ, ಬಾಯಿ ಕಟ್ಟಿ ಹೋದಂತೆ' ಆಡುತ್ತಾಳೆ. ಅವನು ಇಂದ್ರನೆಂದು ತಿಳಿದ ಮೇಲೆ ಅವಳಿಗೆ ಬೆರಗಿನ ಭಾವ ಮೂಡುತ್ತದೆ. ಅಹಲ್ಯೆ–ಇಂದ್ರರಿಬ್ಬರ ಸಮಾಗಮಕ್ಕೆ ಇಡೀ ವಿಶ್ವದ ವ್ಯವಹಾರಗಳನ್ನು ಪಲ್ಲಟಿಸುವಷ್ಟು ಶಕ್ತಿಯಿದೆ.

ಗೌತಮನ ಶಾಪದ ನಂತರ ಇಡೀ ಕೃತಿಯಲ್ಲಿ ದಟ್ಟ ವಿಷಾದ ಆವರಿಸುತ್ತದೆ. ಈಗ ಕಾಮದ ಹುಚ್ಚು ಹೊಳೆ ಇಳಿದಿದೆ. ನಿಧಾನಕ್ಕೆ ಇಡೀ ವಾತಾವರಣ 'ನೈತಿಕವಾಗಿ' ಕೂಡಾ ಈಗ ಎಚ್ಚರವಿದೆ. ಇಲ್ಲಿ ಕಾಮ ಕೂಡಾ ಪರಿವರ್ತಿತನಾಗಿದ್ದಾನೆ. ಈ ಪರಿವರ್ತನೆಯ ಪ್ರಕ್ರಿಯೆ ಎತ್ತರದ ಆಧ್ಯಾತ್ಮಿಕ ನೆಲೆಗಳಲ್ಲಿ ನಡೆಯುತ್ತದೆ. ಮಾರ ಜೀವನ ಪ್ರವೃತ್ತಿಯ ಶಕ್ತಿಯಾಗಿ ಲೋಕಚಲನೆಯಲ್ಲಿ ಒಂದಾಗುತ್ತಾನೆ. ಮದನ ಮತ್ತು ಗೌತಮರ ಮಾತುಗಳಲ್ಲಿ ಕಾಮವೆನ್ನುವುದ ಜೀವನ ಧರ್ಮದ ಅವಿಭಾಜ್ಯ ಅಂಗವಾಗಿ ಅರಳಿದೆ. ಮೂಲಕಾಮದ, ಜೀವಕಾಮದ ನಿರಾಕರಣೆ, ಗೃಹಸ್ಥ ಕಾಮದ, ಸಂಸ್ಕೃತಿಬದ್ಧ ಕಾಮದ ಒಪ್ಪಿಗೆಯ ವಾತಾವರಣ ಮುಂದೆ ಇಡೀ ಕೃತಿನ್ನು ಆವರಿಸುತ್ತದೆ.

ಅಹಲ್ಯೆ ರೂಢಿಗೆ ಹೊರತಾದ ತೀವ್ರತೆಯನ್ನು, ನಿಶ್ಚಿತ ಪರಿವರ್ತನೆಯೊಳಗಿನ ಅನಿಶ್ಚಿತತೆಯುನ್ನು, ಶ್ರದ್ಧೆಯು ಆವರಣದೊಳಗಿನ ಸಂದೇಹವನ್ನು ಬಹುರೂಪೀಲಯಗಳಲ್ಲಿ ಸಂಕೇತಿಸುತ್ತಾಳೆ.

## ರಂಗದ ಮೇಲೆ

| | | |
|---|---|---|
| ಅನಿತಾ. ಆರ್ | – | ಮೇಳ/ಹಿನ್ನಲೆ ಹಾಡುಗಾರ್ತಿ |
| ಬಬಿತಾ. ಎಂ | – | ಮಾಧವಿ/ರಂಭೆ/ಮೇಳ |
| ಬೀರಣ್ಣ ಎಂ.ಪೂಜಾರ್ | – | ಮನ್ಮಥ/ಮೇಳ |
| ಧರ್ಮರಾಜ್ ಗೋನಾಳ್ | – | ಮನ್ಮಥ/ಮೇಳ |
| ಧಿಮಂತ. ಆರ್ | – | ಪುಷ್ಕರ/ರಾಮ/ಮೇಳ |
| ಹರೀಶ್ ಕಲಾಲ್ ಬಿಜಾಪುರ | – | ಇಂದ್ರ/ಮೇಳ |
| ಮರಿಯಮ್ಮ | – | ಮಾಧವಿ/ರಂಭೆ/ಅಪ್ಸರೆ |
| ಮಕರಂದ ಮೈಗೂರು | – | ಕೌಶಿಕ |
| ಮೀನಾಕ್ಷಿ. ಪಿ | – | ಮೇಳ/ಅಪ್ಸರೆ/ಅಹಲ್ಯೆ |
| ನಾಗೇಶ್ ಕುಂದಾಪುರ | – | ಮದನ/ಮೇಳ |
| ನಿತಿನ್ ನಾಯರ್ ಬಿಜಾಪುರ | – | ಮೇಳ/ಮದನ |
| ನಿತೀಶ್ ಕುಮಾರ್ | – | ಲಕ್ಷ್ಮಣ/ಮೇಳ/ಪುಷ್ಕರ |
| ಪ್ರೇಮಕುಮಾರ್ ಕೂಡ್ಲಿಗಿ | – | ಗೌತಮ/ಮೇಳ |
| ರಮ್ಯ. ಎ. ಎಸ್ | – | ಅಹಲ್ಯೆ/ಅಪ್ಸರೆ/ಮೇಳ |
| ರಾಜೇಶ್ವರಿ | – | ಮೇಳ/ಅಪ್ಸರೆ |
| ರಮೇಶ್ ಎಸ್. ದಡದಹಳ್ಳಿ | – | ವಿಶ್ವಾಮಿತ್ರ /ಮೇಳ |
| ರಮೇಶ್ ಮೌನೇಶಪ್ಪ ಬಡಿಗೇರ | – | ಗೌತಮ/ಮೇಳ |
| ಶಂಕರ್. ಕೆ | – | ಮೈತ್ರೇಯ/ಮೇಳ |
| ಸಕೀಲ್. ಬಿ. | – | ಮೇಳ/ಇಂದ್ರ |
| ರೇಣುಕಾ | – | ಅಪ್ಸರೆ/ಮೇಳ |
| ಯೋಗೀಶ್. ಪಿ. | – | ಸಂಗೀತ |

## ಪು. ತಿ. ನರಸಿಂಹಾಚಾರ್ಯ

ಮೇಲುಕೋಟೆಯಲ್ಲಿ 1905 ಮಾರ್ಚ್ 17ರಂದು ಜನಿಸಿದ ಇವರು ಕನ್ನಡದ ನವೋದಯ ಸಾಹಿತ್ಯದ ಮೊದಲ ತಲೆಮಾರಿನ ಬಹುಮುಖ್ಯ ಕವಿ ಹಾಗೂ ನಾಟಕಕಾರರು. ಪು.ತಿ.ನ. ಎಂಬುದು ಪುರೋಹಿತ ತಿರುನಾರಾಯಣ ನರಸಿಂಹಾಚಾರ್ ಎಂಬ ಹೆಸರಿನ ಕಾವ್ಯನಾಮ. ಪ್ರಕೃತಿ ಮತ್ತು ಪ್ರಕೃತಿಯಲ್ಲಿ ದೈವತ್ವದ ಹುಡುಕಾಟ ಇವರ ಕಾವ್ಯದ ಮುಖ್ಯ ಕಾಳಜಿ. ಮೂಲತಃ ಗ್ರಾಮ್ಯ ತಮಿಳನ್ನು ಆಡುತ್ತಿದ್ದ ಇವರು ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಪ್ರಾವಿಣ್ಯತೆಯನ್ನು ಪಡೆದಿದ್ದರು. ಪು. ತಿ. ನ. ಅವರು ಒಟ್ಟು ಹನ್ನೊಂದು ಕವನ ಸಂಕಲನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಮಾಂದಳಿರು, ಹಣತೆ, ಶಾರದಾ ಯಾಮಿನಿ, ಗಣೇಶ ದರ್ಶನ, ಮಲೆ ದೇಗುಲ, ರಸ ಸರಸ್ವತಿ ಮುಖ್ಯವಾದವು. ಅವರ ಮುಖ್ಯ ನಾಟಕಗಳೆಂದರೆ ಗೋಕುಲ ನಿರ್ಗಮನ, ಅಹಲ್ಯೆ, ಶ್ರೀಹರಿಚರಿತೆ, ಸತ್ಯಾಯನ ಹರಿಶ್ಚಂದ್ರ, ಶಬರಿ ಮುಂತಾದವು. ಈಚಲು ಮರದ ಕೆಳಗೆ, ಗೋಕುಲಾಷ್ಟಮಿ, ಭೀತಿ ಮೀಮಾಂಸೆ ಮುಂತಾದವು ಅವರ ಗದ್ಯ ಬರಹಗಳು. ಪದ್ಮಶ್ರೀ, ಪಂಪಪ್ರಶಸ್ತಿ, ನಾಡೋಜ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳ ಪುರಸ್ಕೃತರು.

## ರಂಗದ ಹಿಂದೆ

ರಂಗ ಸಜ್ಜಿಕೆ: ನಿತಿನ್ ನಾಯರ್, ಸಕೀಲ್.ಬಿ, ಭೀರಣ್ಣ ಎಂ.ಪೂಜಾರ್, ಮರಿಯಮ್ಮ, ಯೋಗೀಶ್.ಪಿ,

ಬೆಳಕು: ರಮೇಶ್ ಎಸ್. ದಡದಹಳ್ಳಿ, ಹರೀಶ್ ಕಲಾಲ್ ಬಿಜಾಪುರ, ಧರ್ಮರಾಜ್ ಗೋನಾಳ್, ರಮ್ಯ ಎ. ಎಸ್.

ಉಡುಪು: ಮೀನಾಕ್ಷಿ ಪಿ., ಪ್ರೇಮಕುಮಾರ್ ಕೂಡ್ಲಿಗಿ, ರಾಜೇಶ್ವರಿ, ಧೀಮಂತ್ ಆರ್.

ಪರಿಕರ: ನೀತೀಶ್ ಕುಮಾರ್, ರೇಣುಕಾ

ಪ್ರಸಾಧನ: ಬಬಿತ ಎಂ., ನಾಗೇಶ್

ಪ್ರಚಾರ: ಎಲ್ಲಾ ವಿದ್ಯಾರ್ಥಿಗಳು

ಬ್ರೋಷರ್: ರಮೇಶ್ ಎಸ್. ದಡದಹಳ್ಳಿ, ರಮ್ಯ ಎಂ. ಎಸ್., ಬಬಿತಾ. ಎಂ.

ಸಂಗೀತ ನಿರ್ವಹಣೆ: ಉಮೇಶ ಅಚಾರ್ಯ

ಸಂಗೀತ ಸಹಾಯ : ಅನಿತಾ ಆರ್, ಯೋಗೀಶ್ ಪಿ., ಮಕರಂದ ಮೈಗೂರ್, ಶಂಕರ್.ಕೆ

ರಂಗ ನಿರ್ವಹಣೆ: ರಮೇಶ್ ಮೌನೇಶಪ್ಪ ಬಡಿಗೇರ

ಬೆಳಕಿನ ವಿನ್ಯಾಸ ಮತ್ತು ನಿರ್ವಹಣೆ : ಮಧು. ಈ

ಸಹಾಯ: ಮಹಾದೇವ ಹಡಪದ್ ಮತ್ತು ರೇಣುಕಾ ಡಿ. ಸಿದ್ದಿ

ಸಂಗೀತ: ಉಮೇಶ ಆಚಾರ್ಯ

ರಾಗ ಸಂಯೋಜನ : ಚಂದ್ರಶೇಖರಾಚಾರ್, ಹೆಗ್ಗೊಡಾರ

ವಿನ್ಯಾಸ, ಪರಿಕಲ್ಪನೆ ಮತ್ತು ನಿರ್ದೇಶನ: ನಟರಾಜ ಹೊನ್ನವಳ್ಳಿ

2012-13ನೇ ಸಾಲಿನ ವಿದ್ಯಾರ್ಥಿಗಳ

# ಅಭ್ಯಾಸಮಾಲಿಕಾ ನಾಟಕ ಪ್ರದರ್ಶನ



ಕವಿ

ಪು. ತಿ. ನರಸಿಂಹಾಚಾರ್ಯರ

ಗೀತ ನಾಟಕ

# ಅಹಲ್ಯೆ

Ahalye

ರಾಗ ಸಂಯೋಜನೆ:

ಚಂದ್ರಶೇಖರಾಚಾರ್, ಹೆಗ್ಗೊಡಾರ

ಸಂಗೀತ:

ಉಮೇಶ್ ಆಚಾರ್ಯ

ವಿನ್ಯಾಸ, ಪರಿಕಲ್ಪನೆ ಮತ್ತು ನಿರ್ದೇಶನ:

ನಟರಾಜ ಹೊನ್ನವಳ್ಳಿ

ನವೆಂಬರ್ 26, 27, 28 ಮತ್ತು 29

ಸ್ಥಳ: 'ಅಂತರಂಗ' – ರಂಗಶಾಲೆ

ಸಮಯ: ಸಂಜೆ 7–30ಕ್ಕೆ

ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆ,
ಸಾಣೇಹಳ್ಳಿ – 577515



ನಮ್ಮ ಸ್ವಾಮೀಜಿ:

## ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

70 ರ ದಶಕ ಕನ್ನಡ ಸಂಸ್ಕೃತಿಗೆ ಹಲವಾರು ಉತ್ತಮಾಂಶಗಳನ್ನು ಕೊಟ್ಟ ಕಾಲ. ಸಾಹಿತ್ಯ, ಸಂಘಟನೆ, ಚಳುವಳಿ ಮುಂತಾದವುಗಳಿಂದ 'ಕನ್ನಡ ದೇಶ' ಹೊಸ ತಲೆಮಾರಿಗೆ, ಹೊಸ ಸಂಘರ್ಷಕ್ಕೆ ದಾಟಿಕೊಂಡಿತು. ರಂಗಭೂಮಿ, ಸಿನೇಮಾ ಕೂಡ ಹೊಸ ಹೊಸದಿಕ್ಕಿಗೆ ಹೊರಳಿಕೊಂಡ ಕಾಲ ಕೂಡ ಇದು. ಈ ಇಂಥ ಕಾಲದಲ್ಲೇ ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಸಮಾಜದ ಜೊತೆಗಿನ ಕಾಯಕಕ್ಕೆ ಧುಮುಕಿದರು. ಅಂಥ ಕೆಲಸಕ್ಕೆ ಪ್ರೇರಣೆಯಾದವರು ಅವರ ಪರಮ ಅರಾಧ್ಯ ಗುರುಗಳಾದ ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು. ಪೂಜ್ಯರ ಕಣ್ಣ ಮಠಾರದಲ್ಲೇ ಬೆಳದ ಪಂಡಿತಾರಾಧ್ಯರು ನಿರಂತರವಾಗಿ ಇಪ್ಪತ್ತೈದು ವರ್ಷ ರಂಗಭೂಮಿಯಲ್ಲಿ ತೊಡಗಿಕೊಂಡು ಸಾಣೇಹಳ್ಳಿಯ ಕಲಾಸಂಘವನ್ನು ದೇಶದ ಸಾಂಸ್ಕೃತಿಕ ಕ್ಷೇತ್ರವನ್ನಾಗಿ ಮಾಡುವಲ್ಲಿ ತೋರಿದ ಅಸಾಧಾರಣ ತಾಳ್ಮೆ, ಅಪಾರ ಪರಿಶ್ರಮ ಉಲ್ಲೇಖನೀಯ.

'ಮಾಡಿ ದಣಿಯದ, ನೀಡಿ ದಣಿಯದ, ನಡೆದು ದಣಿಯದ' ತಮ್ಮ ಆಧ್ಯಾತ್ಮ ಗುರುಗಳಾದ ಲಿಂಗೈಕ್ಯ ಶ್ರೀಗಳ ಜನಪರ ಕೆಲಸಗಳನ್ನು ಹಾಗೂ ಶ್ರೀ ತರಳಬಾಳು ಜಗದ್ಗುರು ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಮುಂದುವರಿಸಿದ ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಹಾಡು–ಕುಣಿತ, ಆಟ–ನಾಟಕ. ಶಿಕ್ಷಣ–ಸಮಾಜ, ಗೋಷ್ಠಿ–ಚರ್ಚೆ, ಸದ್ಧರ್ಮ–ನ್ಯಾಯಾಲಯ ಹೀಗೆ ಕ್ಷಣ ಹೊತ್ತೂ ಬಿಡುವಿಲ್ಲದೆ ಹತ್ತಾರು ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಬರಹಗಾರರಾಗಿ, ನಾಟಕಕಾರರಾಗಿ, ಜನಪರ ಧ್ವನಿಯಾಗಿ ರಂಗಭೂಮಿಯ ಮೂಲಕ ವೈಚಾರಿಕ ಹಾಗೂ ನೈತಿಕ ಮೌಲ್ಯಗಳನ್ನು ಬಿತ್ತರಿಸುವ ಉದ್ದೇಶದಿಂದ ಶ್ರೀ ಶಿವಕುಮಾರ ಕಲಾಸಂಘ ಕಟ್ಟಿ, ಕಲಾಸಂಘ, ಶಿವಸಂಚಾರ, ರಂಗಪ್ರಯೋಗ ಶಾಲೆ ಎಲ್ಲಕ್ಕೂ ಪ್ರೇರಕ ಶಕ್ತಿಯಾಗಿದ್ದಾರೆ. ಸಮಕಾಲೀನ ಧರ್ಮ, ರಾಜಕೀಯ, ವೈಚಾರಿಕ ನಿಲುವುಗಳನ್ನು ಗ್ರಹಿಸಿ ಸಮಷ್ಠಿ ಪ್ರಜ್ಞೆಯಲ್ಲಿ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಾರೆ. ರಂಗಭೂಮಿಯನ್ನು ಶಾಸ್ತ್ರೀಯವಾಗಿ ಹಾಗೂ ಪ್ರಾಯೋಗಿಕವಾಗಿ ಕಲಿಸುವ ಸಾಧ್ಯಾಸಾಧ್ಯತೆಗಳನ್ನು ಮನಗಂಡು ರಂಗಪ್ರಯೋಗ ಶಾಲೆಯನ್ನು ಪ್ರಾರಂಭಿಸುವ ಕನಸು ಕಂಡು ನನಸು ಮಾಡಿದ್ದಾರೆ. ವಸ್ತುವಿನ ಚಿಕಿತ್ಸಕ ಗುಣಗಳನ್ನು ಗುರ್ತಿಸಿ ಅದರ ಆಗು–ಹೋಗುಗಳನ್ನು ಸಾಮಾಜಿಕ ಹಿತದಲ್ಲಿ ಚರ್ಚಿಸುವ ಅವರ ನಿಲುವುಗಳು ಸಮಾಜವಾದಿಯೊಬ್ಬರ ತೀವ್ರತೆಯಷ್ಟೇ ಮುಖ್ಯವೆನಿಸುತ್ತದೆ.

ತತ್ವಶಾಸ್ತ್ರದಲ್ಲಿ ಎಂ. ಎ. ಪದವಿ ಹಾಗೂ ಕುವೆಂಪು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪಡೆದಿರುವ ಶ್ರೀಗಳು ಮನಸ್ಸಿನಲ್ಲೇ ಹಾಡುತ್ತಾರೆ, ಕುಣಿಯುತ್ತಾರೆ, ಸಿಟ್ಟುಮಾಡಿ ಕೆಲಸಗಳನ್ನು ಸರಿಯಾದ ದಿಕ್ಕಿಗೆ ಹಚ್ಚುತ್ತಾರೆ. ಸದಾ ಅವರ ತಲೆಯಲ್ಲಿ ಸ್ಟೇಜ್, ಸೌಂಡ್, ಲೈಟ್, ತಾಲೀಮು, ಸಂಗೀತ, ತೋಟ, ಮರಗಿಡಬಳ್ಳಿ, ವಿದ್ಯಾರ್ಥಿಗಳ ಶಿಕ್ಷಣ, ಭಕ್ತರ ಏಳ್ಗೆ ತುಂಬಿರುವುದು. ಅಲ್ಲದೆ ಇಂಥಾ ಹಲವು ಹತ್ತು ವಿಷಯಗಳಲ್ಲಿ ತಮ್ಮನ್ನು ತೀಕ್ಷ್ಣವಾಗಿ ತೊಡಗಿಸಿಕೊಂಡಿದ್ದಾರೆ. ಸ್ವಾಮೀಜಿ ಭಕ್ತ ಸಮೂಹಕ್ಕೆ ಸ್ಥಾವರವಾಗಿ ಕಂಡರೆ, ರಂಗಭೂಮಿಯವರಿಗೆ ಜಂಗಮ ರೂಪದಲ್ಲಿ ಕಾಣಸಿಗುತ್ತಾರೆ. ಹೀಗೆ ಸ್ಥಾವರ ಹಾಗೂ ಜಂಗಮ ತತ್ವವನ್ನು ತಮ್ಮಲ್ಲಿ ವಿಶೇಷವಾಗಿ ಪರಿಭಾವಿಸಿಕೊಂಡಿದ್ದಾರೆ.


### ಕೃತಜ್ಞತೆಗಳು

- ಶ್ರೀ ಶಿವಕುಮಾರ ಕಲಾಸಂಘದ ಸಮಸ್ತ ಬಳಗ
- ಸಾಣೇಹಳ್ಳಿಯ ಸಮಸ್ತ ಗ್ರಾಮಸ್ಥರು.
- ಬೋಧಕ ಹಾಗೂ ಬೋಧಕೇತರ ಸಿಬ್ಬಂಧಿ – ಶ್ರೀ ಗುರುಪಾದೇಶ್ವರ ಪ್ರೌಢ ಶಾಲೆ
- ಬೋಧಕ ಹಾಗೂ ಬೋಧಕೇತರ ಸಿಬ್ಬಂಧಿ – ಶ್ರೀ ಶಿವಕುಮಾರ ಸ್ವಾಮೀಜಿ ಹಿರಿಯ ಪ್ರಾಥಮಿಕ ಶಾಲೆ
- ಬೋಧಕ ಹಾಗೂ ಬೋಧಕೇತರ ಸಿಬ್ಬಂಧಿ – ಶ್ರೀ ಶಿವಕುಮಾರ ಡಿ.ಇಡಿ. ಕಾಲೇಜ್


## ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆ

- ಸ್ಥಾಪನೆ: 2008.
- ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಕನಸಿನ ಫಲ ಈ ರಂಗಶಾಲೆ.
- ಪ್ರಸಿದ್ಧ ರಂಗತಜ್ಞ ಶ್ರೀ ಚಿದಂಬರ ರಾವ್ ಜಂಬೆಯವರು ಈ ಶಾಲೆಯ ಸಂಸ್ಥಾಪಕ ನಿರ್ದೇಶಕರು.
- ಶಿಕ್ಷಣದ ಅವಧಿ ಹತ್ತು ತಿಂಗಳು. ಕನಿಷ್ಟ ವಿದ್ಯಾರ್ಹತೆ ಎಸ್.ಎಲ್.ಎಲ್.ಸಿ. ಪದವೀಧರರಿಗೆ ಆದ್ಯತೆ.
- 20 ಜನ ರಂಗಭೂಮಿಯ ಆಸಕ್ತ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಮಾತ್ರ ಪ್ರವೇಶ. ಸಂದರ್ಶನದ ಮೂಲಕ ಅಭ್ಯರ್ಥಿಗಳ ಆಯ್ಕೆ.
- ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಿಂದ ಪರೀಕ್ಷೆ. ಡಿಪ್ಲೋಮಾ ಇನ್ ಥಿಯೇಟರ್ ಆರ್ಟ್ಸ್ ಪದವಿ

## ಬೋಧಿಸುವ ವಿಷಯಗಳು

- ಭಾರತೀಯ ರಂಗಭೂಮಿ.
- ಕನ್ನಡ ರಂಗಭೂಮಿ ಮತ್ತು ಸಾಹಿತ್ಯ ಪರಂಪರೆ.
- ಪಾಶ್ಚಾತ್ಯ ರಂಗಭೂಮಿ.
- ಅಭಿನಯ – ತಾತ್ವಿಕ ಹಾಗೂ ಪ್ರಾಯೋಗಿಕ.
- ಆಹಾರ್ಯ – ತಾತ್ವಿಕ ಹಾಗೂ ಪ್ರಾಯೋಗಿಕ.
- ಶಿಕ್ಷಣದಲ್ಲಿ ರಂಗಭೂಮಿ – ತಾತ್ವಿಕ ಹಾಗೂ ಪ್ರಾಯೋಗಿಕ.

ದೀರ್ಘಸಮಯದ ಕಾರ್ಯಾಗಾರಗಳು: ಕಳರಿ–ಕೇರಳದ ಸಮರ ಕಲೆ, ಕಂಸಾಳೆ, ಕೋಲಾಟ, ಹೆಜ್ಜೆಮೇಳೆ, ಯಕ್ಷಗಾನ, ಕಥಕ್ಕಳಿ – ಅಂಗ, ಪ್ರತ್ಯಂಗ ಮತ್ತು ಉಪಾಂಗದ ಅಭ್ಯಾಸಕ್ಕಾಗಿ, ಮಣಿಪುರದ ಸಮರಕಲೆ, ವೀರಗಾಸೆ, ಯೋಗ ಹಾಗೂ ಪ್ರಾಣಾಯಾಮ, ಮುಖವಾಡ ತಯಾರಿ, ದೊಡ್ಡಾಟ, ಪ್ರಸಾಧನ, ಸಮಕಾಲೀನ ನೃತ್ಯ, ಬೆಳಕಿನ ವಿನ್ಯಾಸ, ವಸ್ತ್ರ ವಿನ್ಯಾಸ, ರಂಗ ವಿನ್ಯಾಸ.

ಪುಟ್ಟ ಕಮ್ಮಟಗಳು: ಕಾವ್ಯ, ಸಿನೇಮಾ ಮತ್ತು ಚಿತ್ರಕಲೆ.

- ಕರ್ನಾಟಕ ಹಾಗೂ ಭಾರತದ ರಂಗತಜ್ಞರು ಮತ್ತು ನಿರ್ದೇಶಕರಿಂದ ಶಿಕ್ಷಣ.
- ವರ್ಷದಲ್ಲಿ ನಾಲ್ಕಕ್ಕೂ ಹೆಚ್ಚು ನಾಟಕಗಳ ಅಭ್ಯಾಸ ಹಾಗೂ ಪ್ರದರ್ಶನ.
- ಬಹುತೇಕ ಅಥಿತಿ ಉಪನ್ಯಾಸಕರಿಂದ ಪಾಠ–ಪ್ರವಚನಗಳು.

### • ಕನ್ನಡದ ಅತಿಥಿ ಉಪನ್ಯಾಸಕರು

ಕಿ.ರಂ. ನಾಗರಾಜ್, ಡಾ॥ ಓ.ಎಲ್. ನಾಗಭೂಷಣ ಸ್ವಾಮಿ, ಜಿ.ಕೆ. ಗೋವಿಂದರಾವ್. ಡಾ॥ ನಟರಾಜ್ ಹುಳಿಯಾರ್, ಡಾ॥ ವಿಕ್ರಮ ವಿಸಾಜಿ. ಡಾ॥ ಎಂ.ಎಂ. ಕಲಬುರ್ಗಿ, ಡಾ॥ ಕೆ. ಮರುಳಸಿದ್ಧಪ್ಪ, ಡಾ॥ ಸಿದ್ಧಲಿಂಗಪಟ್ಟಣ ಶೆಟ್ಟಿ, ಡಾ॥ ರಾಮಕೃಷ್ಣ ಮರಾಠೆ, ಡಾ॥ ಜಿ. ಎಸ್. ಭಟ್, ಡಾ॥ ಗುರುರಾವ್ ಬಾಪಟ್, ಪ್ರೊ. ಲಿಂಗದೇವರು ಹಳೇಮನೆ, ಪ್ರೊ. ಎಚ್.ಎಸ್. ಉಮೇಶ್, ಏಣಗಿ ಬಾಳಪ್ಪ, ಪುಟ್ಟಣ್ಣಯ್ಯ, ಎಸ್. ಮಾಲತಿ, ಡಾ॥ ಬಸವರಾಜ ಮಲಶೆಟ್ಟಿ, ಡಾ॥ ಎನ್.ಎಸ್. ತಾರಾನಾಥ್, ಜೆ. ಶ್ರೀನಿವಾಸ ಮೂರ್ತಿ, ಡಾ॥ ಕೃಷ್ಣಮೂರ್ತಿ ಹನೂರು, ಪ್ರಕಾಶ್ ಬೆಳವಾಡಿ, ಉಷಾ ಭಂಡಾರಿ, ನಿಂಗೂ ಸೊಲಗಿ, ಎಸ್.ಆರ್. ವಿಜಯಶಂಕರ್, ಡಾ॥ ಪ್ರಕಾಶ್ ಗರೂಡ, ಶಶಿಧರ ತೋಡ್ಕರ್, ಜಗುಚಂದ್ರ, ಡಾ॥ ಜಿ. ಎಸ್. ರಮೇಶ್ ಮತ್ತಿತರರು

### • ನಿರ್ದೇಕರು ಮತ್ತು ಕಾರ್ಯಾಗಾರಗಳ ಸಂಪನ್ಮೂಲ ವ್ಯಕ್ತಿಗಳು

ಪ್ರಸನ್ನ, ಇಕ್ಬಾಲ್ ಅಹಮದ್, ಚಿದಂಬರರಾವ್ ಜಂಬೆ, ನಟರಾಜ ಹೊನ್ನವಳ್ಳಿ, ಸಿ. ಬಸವಲಿಂಗಯ್ಯ, ಕೆ.ಜಿ. ಕೃಷ್ಣಮೂರ್ತಿ, ವಿಶಾಲ ಪಾಟೀಲ್, ಸಂಜೀವ ಸುವರ್ಣ, ಮಂಜುನಾಥ್ ಬಡಿಗೇರ, ಸುಷ್ಮಾ ಪ್ರಶಾಂತ್, ಯತೀಶ್ ಚಾಮರಾಜನಗರ, ಮಹಾಂತೇಶ್ ರಾಮದುರ್ಗ, ಮಹಾದೇವ ಹಡಪದ್, ರೇಣುಕಾ ಸಿದ್ಧಿ, ಯು.ಎಸ್. ರಾಮಣ್ಣ, ಮಾಧುರಿ ಉಪಾಧ್ಯಾಯ. ಗೀತಾಬಲ್ಲಾಳ್, ಮಲ್ಲಿಕಾ ಪ್ರಸಾದ್, ಮಹಾದೇವ ಪ್ರಸಾದ್, ಎಸ್. ಕೇಶವಮೂರ್ತಿ, ಕೆ.ಎಸ್. ಶರತ್, ಎಂ.ಎಸ್. ಪ್ರಕಾಶ್ ಬಾಬು, ಬಸವಲಿಂಗಯ್ಯ ಹಿರೇಮಠ್, ಜಯರಾಮ್ ತಾತಾಚಾರ್, ಲಕ್ಷಣದಾಸ್, ಮಿತಾಮಿಶ್ರ, ಚಂಪಕ ಶ್ರೀಧರ್, ಶ್ರೀಪಾದ ಭಟ್, ಎಂ.ಎಂ. ಕೃಷ್ಣಮೂರ್ತಿ. ಪುರುಶೋತ್ತಮ ತಲವಾಟ, ಮುರಹರಿ ಕಾಸರಗೋಡು, ರಜನಿ ಗರೂಡ್, ಚಂಡೆ ನಾಗರಾಜ್, ಚಂದ್ರಶೇಖರಾಚಾರ್, ಬೆಣ್ಣೆ ಗಜಾನನ, ಎಸ್. ಆರ್. ರಾಮಕೃಷ್ಣ, ಎಂ.ಪಿ.ಎಂ. ವೀರೇಶ್, ಅನುಪಮಾ ಪ್ರಕಾಶ್, ಐ.ಕೆ. ಬೋಳುವಾರ್, ರಾಘವೇಂದ್ರ ಗುರೂಜಿ, ಪದ್ಮಾ ಕೊಡಗು, ಪ್ರಸನ್ನ ಸಾಗರ, ಬಸವರಾಜ್ ಶಿಗ್ಗಾಂವ್, ವಾಸುದೇವ್ ಬೆಂಗಳೂರು, ನಕುಲ, ಬೆಂಗಳೂರು ಮತ್ತಿತರರು.

### • ಭಾರತೀಯ ಅತಿಥಿ ಉಪನ್ಯಾಸಕರು ಮತ್ತು ನಿರ್ದೇಶಕರು:

ರಮೇಶ್ ವರ್ಮ, ಕನ್ನಯ್ಯಲಾಲ್, ಸಾವಿತ್ರಿ ದೇವಿ, ಅನಾಮಿಕಾ ಹಕ್ಸರ್, ರವೀಂದ್ರ ಸಾಹು, ಪ್ರಣಾಮಿ, ಭಾಗೀರಥಿಬಾಯಿ ಕದಂ, ದಿನೇಶ್ ಖನ್ನ, ರಾಜೀವ್ ವೇಲಚೆಟ್ಟಿ, ಪ್ರಶೋಬ್ ಕಲಾಮಂಡಲಂ, ವಿನೋದ್ ಪಾಂಡಿಚೆರಿ. ಗೋಪಿನಾಥ್, ವಿನಯ್, ಗೌರವ್ ಶರ್ಮ, ಕೆ. ಎಸ್. ರಾಜೇಂದ್ರನ್, ಪ್ರೊ. ಅನಂತಕೃಷ್ಣನ್. ಶಂತನು ಬೋಸ್, ರಾಮ್ ಕುಮಾರ್, ಕೇರಳ ಮತ್ತಿತರರು.

- ವಿದೇಶಿ ಅತಿಥಿ ಉಪನ್ಯಾಸಕರು: ಎವೆಲಿನ್ ಪುಲೆನ್ಸ್.
- 7000ಕ್ಕೂ ಹೆಚ್ಚು ಇಂಗ್ಲಿಷ್ ಹಾಗೂ ಕನ್ನಡ ಪುಸ್ತಕಗಳನ್ನೊಳಗೊಂಡ ಗ್ರಂಥಾಲಯವಿದೆ.
- ಸಿನೇಮಾ ಹಾಗೂ ನಾಟಕ ವೀಕ್ಷಿಸಲು ಶ್ರವ್ಯ–ದೃಶ್ಯ ಗ್ರಂಥಾಲಯವಿದೆ. ನಾಟಕಗಳ ಅಭ್ಯಾಸಕ್ಕೆ ಮೂರು ತಾಲೀಮು ಕೊಠಡಿಗಳು ಲಭ್ಯವಿದೆ.
- ನಾಟಕದ ಪ್ರದರ್ಶನಕ್ಕೆ ನಾಲ್ಕು ರಂಗಮಂದಿರಗಳು ಲಭ್ಯವಿದೆ.
- ಎಲ್ಲಾ ರಂಗಾಭ್ಯಾಸಿಗಳೂ ಸುಸಜ್ಜಿತ ಹಾಸ್ಟಲ್ ಇದೆ. ಮಹಿಳೆಯರಿಗೆ ಸುಸಜ್ಜಿತವಾದ ಪ್ರತ್ಯೇಕ ಹಾಸ್ಟಲ್‌ನ ವ್ಯವಸ್ಥೆ ಇದೆ.
- ರಂಗಶಾಲೆಗೆ ಪ್ರತ್ಯೇಕ ಕ್ಯಾಂಟೀನ್ ಇದೆ.
- ನಟರಾಜ ಹೊನ್ನವಳ್ಳಿ ಈ ಶಾಲೆಯ ಪ್ರಾಂಶುಪಾಲರು.

## ನಾಟಕ: ಅಹಲ್ಯೆ

ಪು. ತಿ. ನರಸಿಂಹಾಚಾರ್ಯರ 'ಅಹಲ್ಯೆ' ಮತ್ತು 'ಗೋಕುಲ ನಿರ್ಗಮನ' ನಾಟಕಗಳ ವಸ್ತು ಧರ್ಮ ಮತ್ತು ಕಾಮಗಳೆರಡರ ಸಂಘರ್ಷ. ಅಹಲ್ಯೆ ಕೃತಿಯ ಪೂರ್ವಾಂಕದಿಂದಲೇ 'ಕಾಮ' ಮತ್ತು 'ಸಮಯ'ಗಳೆರಡರ ಸಂಘರ್ಷ ಪ್ರಾರಂಭವಾಗುತ್ತದೆ. ಈ ಸಂಘರ್ಷವನ್ನು ನಾವು ಬರೀ ಅಹಲ್ಯೆಗೆ ಸೀಮಿತಗೊಳಿಸಬಾರದು. ಅದು ಇಂದ್ರ ಮತ್ತು ಗೌತಮರನ್ನು ಕೂಡ ಆವರಿಸಿದೆ. ಈ ಸಂಘರ್ಷ ಮೊದಲು ಪ್ರಾರಂಭವಾಗುವುದೇ ಗೌತಮ–ಇಂದ್ರರ ನೆಲೆಯಲ್ಲಿ. ಗೌತಮನ ಪಥ ಭ್ರಷ್ಟತೆಯ, ಧರ್ಮ ಭ್ರಷ್ಟತೆಯ ಪ್ರಯತ್ನದಿಂದಲೇ ಈ ಸರ್ವವ್ಯಾಪೀ ಸಂಘರ್ಷದ ಬೆಳವಣಿಗೆ ಶುರು. ಮೊದಲು ರಂಭೆ ಋಷಿಯನ್ನು ವ್ಯಾಮೋಹಿಯನ್ನಾಗಿ ಮಾಡಲು ಪ್ರಯತ್ನಿಸಿ ವಿಫಲಳಾಗುತ್ತಾಳೆ. ಋಷಿಯದು ಕೂಡ ಇನ್ನೊಂದು ರೀತಿಯ ಕಾಮವೇ, ಅಧಿಕಾರ ಕಾಮ ಅದು. ಇಂದ್ರನ ಮಾತುಗಳಲ್ಲಿ ಆ ಬಗೆಯ ಚಿಂತನೆ ಇದೆ. ಈ ಸುಂದರ ಸಾಲುಗಳಲ್ಲಿ, ಗೌತಮನ ಬಗ್ಗೆ ಅವನು ಈ ಮಾತು ಹೇಳುತ್ತಾನೆ:

*ಈ ಮರ್ತ್ಯಮಾನಸದ ಆಳವ ಬಲ್ಲವರಾರು?*
*ಇರುಳನಂತೆ ಗಹನವಿದು, ದುರ್ಗ್ರಾಹ್ಯವು!*
*ಇದನಳೆವ ಬೆಳಕಿಲ್ಲ, ಇದನರಿವ ಅರಿವಿಲ್ಲ.*

ಈ ಸಂಘರ್ಷದಲ್ಲಿ ಕಾಮನೇ ಬರುತ್ತಾನೆ. ಕಾಮನನ್ನು ಇಂದ್ರ ಬಳಸಿಕೊಳ್ಳುವ ಹಾಗೆ ಕಂಡರೂ ಅಂತಿಮವಾಗಿ ಇಲ್ಲಿ ಗೆಲ್ಲುವುದು ಕಾಮನೇ. ಕಾಮನೇ ಮುಂದೆ ತನ್ನ ಬಗ್ಗೆ ಹೇಳುವ ಮಾತುಗಳು ಆತನ ಶಕ್ತಿಯನ್ನು ಸ್ಪಷ್ಟಪಡಿಸುತ್ತವೆ. ತನ್ನನ್ನು ಪ್ರಕೃತಿ ಎಂದೂ ಕರೆದುಕೊಳ್ಳುತ್ತಾನೆ. ಪ್ರಕೃತಿಯನ್ನು ನಿಯಂತ್ರಿಸಬಯಸುವ ಸಂಸ್ಕೃತಿಯ, ಕಟ್ಟುಕಟ್ಟಳೆಗಳ ಕೆಲಸ ತೀರಾ ಕಷ್ಟಕರವಾದದ್ದು. ತನ್ನ ಹೋರಾಟಕ್ಕೆ, ಅಥವಾ ಕಟ್ಟುಕಟ್ಟಳೆಗಳ ಒಳತಿರುಳನ್ನು ಪರೀಕ್ಷಿಸಲು ಮಾರ ಸನ್ನದ್ಧನಾಗಿದ್ದಾನೆ. ಇಲ್ಲಿರುವ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಆ ಒತ್ತಡವನ್ನು ಅನುಭವಿಸುತ್ತಿದ್ದಾರೆ. ಇಂದ್ರನೂ ಇದೇ ಸ್ಥಿತಿಯಲ್ಲಿದ್ದಾನೆ, ಅಹಲ್ಯೆಯನ್ನು ನೋಡಿ ದಂಗಾಗಿ ಹೋಗಿದ್ದಾನೆ. ಮದನ ಅವನನ್ನು ರೇಗಿಸುತ್ತಾನೆ: 'ಹೆಣ್ಣ ನೋಡುತ ನಿಂತೊಡಾಯಿತೆ ಮುನಿಯ ಗೆಲ್ಲುವ ಕಾರ್ಯವು?' ಅಹಲ್ಯೆಯೂ ಏಕೋ ತನಗೇ ಗೊತ್ತಿಲ್ಲದೆ ರಾಗಪರವಶಳಾಗಿದ್ದಾಳೆ. 'ಆವ ಆಸೆಯ ಗಂಧ ಸೆಳೆಯಿತು, ಆವ ಮುದಮಕರಂದ ಸೆಳೆಯಿತು' ಎನ್ನುತ್ತಾ ತನ್ನ ಭೈರಾಗಿಯನ್ನು ನೆನೆಸಿಕೊಳ್ಳುತ್ತಾಳೆ.

ಹೀಗೆ ಎಲ್ಲರೂ ತಮ್ಮ ಪಥಗಳನ್ನು ಬಿಟ್ಟು ರಾಗಾವೇಶದಿಂದ ಬೇರೆ ಪಥಗಳನ್ನು ಹಿಡಿಯುತ್ತಾರೆ. ವ್ಯಂಗ್ಯದ ಸಂಗತಿ ಎಂದರೆ, ಈ ಅನ್ಯಪಥಕ್ರಮಣವನ್ನು ಎಲ್ಲರೂ ಗೊತ್ತಿದ್ದೆ ಮಾಡುತ್ತಾರೆ. ಅದನ್ನೇ ಪ್ರಕೃತಿ ಎಂದು ಭಾವಿಸುತ್ತಾರೆ. ಹಾಗೆ ಜೀವಿಸುವುದೇ ಮುಖ್ಯವೆಂದು ಭಾವಿಸುತ್ತಾರೆ. 'ಹುಸಿ ಮಿಕ್ಕಿನ ರಾಗಮಿದೆಲ್ಲಾ' ಎಂದು ಇಂದ್ರ ಬಾಯಿಬಿಟ್ಟು ಹೇಳುತ್ತಾನೆ. ಬೇರೆಯವರಿರಲಿ ಗೌತಮನೂ ಈ ಪ್ರಕೃತಿಯ ವಿದ್ಯುದಾವೇಗಕ್ಕೆ ಒಳಗಾಗಿದ್ದಾನೆ. ಮತ್ತು ಅದನ್ನೇ ತನ್ನ ಬಾಳಿನ ಅಧಿಕೃತ ದಾರಿ ಎಂದು ಅಂದುಕೊಂಡಿದ್ದಾನೆ. ಮೊದಮೊದಲು ಮನಸಿಜನಮಾಯೆ ಇದು, ಇದು ಗೆಲ್ಲಬೇಕೆಂದು ಕಡು ಕಷ್ಟದೊಳು ಧ್ಯಾನದಾಳಕೆ ನಡೆದವನಿಗೆ ಎಂಥದೋ ಮಿಂಚು ಹೊಳೆಯುತ್ತದೆ. ಕನಸೊಂದು ಕಾಣುತ್ತಾನೆ.